

# ರಶ್ದಿಗೆ 'ಶಾಂತಿ' ಪುರಸ್ಕಾರ

■ ರಾಘು

'ಪ್ರಯತ್ನಕ್ಕೆ ಪರಮೇಶ್ವರನೂ ಸಹಾಯ ಮಾಡುವವನು' ಎಂಬುದು ಜನಪದರ ನುಡಿ. ಎಂತಹ ವಿರೋಧವನ್ನೂ ಗೆಲ್ಲುವ ಶಕ್ತಿ ನಮ್ಮ ಪರಿಶ್ರಮ ಕಾಯಕ ನಿಷ್ಠೆಗೆ ಇದೆ ಎಂದು ಈ ಗಾದೆ ಹೇಳುತ್ತದೆ. ಜಗತ್ತಿನಾದ್ಯಂತ ಯುದ್ಧದಾಹ, ಕ್ರೌರ್ಯ ಮಾನವಕುಲವನ್ನು ನಲುಗಿಸುತ್ತಿದೆ. ಮತ್ತೊಂದು ಕಡೆ ಶಾಂತಿ ವಾರಸುದಾರಿಕೆಯ ಹಕ್ಕುಸ್ವಾಮ್ಯಕ್ಕೆ ಪ್ರಬಲ ಪೈಪೋಟಿಯೂ ನಡೆಯುತ್ತದೆ. ಇದು ವೈರುಧ್ಯ ಅನ್ನಿಸಿದರೂ ವಾಸ್ತವದಲ್ಲಿ ಅದೇ ಕಾಣಿಸುತ್ತಿದೆ. ಅದು ಸಲ್ಮಾನ್ ರಶ್ದಿ ಅವರ ಜೀವಮಾನದ ಸಾಧನೆಯಲ್ಲಿ ಗೋಚರಿಸಿದರೂ ಅಚ್ಚರಿ ಅನ್ನಿಸುವುದಿಲ್ಲ. ಮೂಲಭೂತವಾದಿಗಳು, ಉಗ್ರವಾದಿಗಳು ಧರ್ಮದ್ರೋಹಿ ಎಂದು ಅವರನ್ನು ಹತ್ಯೆಗೈಯಲು ಹವಣಿಸುತ್ತಿದ್ದಾರೆ. ಮತ್ತೊಂದೆಡೆ ಅವರ ಸಾಹಿತ್ಯದಲ್ಲಿ ಇರುವ ಅಂತಃಕರಣ ಮತ್ತು ಮಾನವೀಯ ಮೌಲ್ಯದ ಬಗ್ಗೆ ಸಂವಾದ, ಉಪನ್ಯಾಸಗಳು ನಡೆಯುತ್ತವೆ. ಅಭಿವ್ಯಕ್ತಿ ಸಾತಂತ್ರ್ಯದ ಮೂಲ ಅವಶ್ಯ ಎನ್ನುವುದನ್ನು ಪ್ರತಿಪಾದಿಸುವ ಲೇಖಕ ರಶ್ದಿ ಅವರಿಗೆ ಈಚೆಗೆ ವಿಶ್ವ ಪ್ರಸಿದ್ಧ 'ಡೇಟನ್ ಸಾಹಿತ್ಯ ಶಾಂತಿ ಪ್ರಶಸ್ತಿ' ಸಂದಿದೆ. ಈ ಹಿನ್ನೆಲೆಯಲ್ಲಿ ಅವರ ಮಾನವೀಯ ಚಿಂತನೆ ಮತ್ತೆ ಮುನ್ನೆಲೆಗೆ ಬಂದಿದೆ.

ಭಾರತೀಯ ಮೂಲದ ಪ್ರಮುಖ ಇಂಗ್ಲಿಷ್ ಲೇಖಕ ಸಲ್ಮಾನ್ ರಶ್ದಿ ಅವರಿಗೆ 2025ರ 'ಡೇಟನ್ ಲಿಟರರಿ ಪೀಸ್ ಪ್ರೈಝ್– ಲೈಫ್ ಟೈಮ್ ಅಚೀವ್‌ಮೆಂಟ್ ಅವಾರ್ಡ್' ಸಂದಾಯವಾಗಿದೆ. ಈಚೆಗೆ ಅಮೆರಿಕದ ಓಹೊಯೊದಲ್ಲಿ ನಡೆದ ಸಮಾರಂಭದಲ್ಲಿ 'ಡೇಟನ್ ಸಾಹಿತ್ಯ ಶಾಂತಿ ಪ್ರಶಸ್ತಿ'ಯನ್ನು ನೀಡಿ ಅವರನ್ನು ಗೌರವಿಸಲಾಗಿದೆ. ಜಾಗತಿಕ ಸಾಹಿತ್ಯ ಸಂವಾದವನ್ನು ಉತ್ತೇಜಿಸುವ ದೃಷ್ಟಿಯಿಂದ ಈ 'ಶಾಂತಿ' ಪುರಸ್ಕಾರವನ್ನು ನೀಡಲಾಗುತ್ತದೆ. ಕಥನ ಸಾಹಿತ್ಯಕ್ಕೆ ನೀಡುವ ಪ್ರಮುಖ ಪ್ರಶಸ್ತಿ ಇದಾಗಿದೆ. ದೀರ್ಘಕಾಲ ಸಾಹಿತ್ಯದ ಮೂಲಕ ಸಮಾಜಕ್ಕೆ ಸದಾಶಯದ ಪ್ರೇರಣೆಯನ್ನು ನೀಡಿದ್ದಾರೆ ಎನ್ನುವುದನ್ನು ಗುರುತಿಸಿ ಸಲ್ಮಾನ್ ರಶ್ದಿ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ.

'ಸಾಹಿತ್ಯ ಎನ್ನುವುದು ಸ್ವಾತಂತ್ರ್ಯ ಮತ್ತು ಮಾನವೀಯ ಬಲವನ್ನು ಒಳಗೊಂಡಿರಬೇಕು. ಲೇಖಕರಾದವರು ಸಮಾಜದಲ್ಲಿರುವ ಅನ್ಯಾಯವನ್ನು ಪ್ರಶ್ನಿಸಬೇಕು. ಜೊತೆಗೆ ಅವರ ಬರಹ ಹೊಸ ಚಿಂತನೆಯನ್ನು ಹುಟ್ಟಿಸುವಂತೆ ಇರಬೇಕು. ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉತ್ತೇಜಿಸುವಂತೆ ಸಾಹಿತ್ಯ ಕೃಷಿಯನ್ನು ಸೃಜಿಸಬೇಕು' ಎನ್ನುವ ಆಶಯವನ್ನು ಪ್ರಶಸ್ತಿ ಸ್ವೀಕರಿಸಿದ ನಂತರ ಸಲ್ಮಾನ್ ರಶ್ದಿ ವ್ಯಕ್ತಪಡಿಸಿದ್ದಾರೆ.

ಜೂನ್ 19, 1947 ಮುಂಬೈನಲ್ಲಿ ಕಾಶ್ಮೀರಿ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ರಶ್ದಿ ಈಗ ಅಮೆರಿಕದಲ್ಲಿ ನೆಲೆಸಿದ್ದಾರೆ. ಅವರ ನಾಲ್ಕನೇ ಕಾದಂಬರಿ 'ದಿ ಸಟಾನಿಕ್ ವರ್ಸಸ್' ಜಗತ್ತಿನಾದ್ಯಂತ ವಿವಾದದ ಬಿರುಗಾಳಿಯನ್ನೇ ಎಬ್ಬಿಸಿತ್ತು. ಆ ಕೃತಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಆರೋಪಿಸಲಾಗಿತ್ತು. ಭಾರತವೂ ಸೇರಿದಂತೆ 20 ದೇಶಗಳಲ್ಲಿ ಆ ಕೃತಿಗೆ ನಿಷೇಧವನ್ನು ಹೇರಲಾಗಿದೆ. ಅದರ ಬೆನ್ನಿಗೆ ರಶ್ದಿ ಹತ್ಯೆಗೆ ಫತ್ವಾವನ್ನೂ ಹೊರಡಿಸಲಾಗಿದೆ. ಹತ್ಯೆಯ ಸಂಚು ಅವರನ್ನು ನೆರಳಿನಂತೆ ಹಿಂಬಾಲಿಸುತ್ತಿದ್ದರೂ ಅದನ್ನು ಲೆಕ್ಕಿಸದೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಅವರು ಶಾಂತಿ ಮರುಸ್ಥಾಪನೆಗೆ ಮಾದರಿಯಾಗಿದ್ದಾರೆ.

ಜನವರಿ 2012ರ 'ಜೈಪುರ ಸಾಹಿತ್ಯ' ಉತ್ಸವಕ್ಕೆ ರಶ್ದಿ ಅವರಿಗೆ ಆಹ್ವಾನ ನೀಡಲಾಗಿತ್ತು. ಮೂಲಭೂತವಾದಿ ಸಂಘಟನೆಗಳ ಬೆದರಿಕೆ ತೀವ್ರವಾದ ಹಿನ್ನೆಲೆಯಲ್ಲಿ ಅವರು ಭಾರತಕ್ಕೆ ಭೇಟಿ ನೀಡಬೇಕಿದ್ದ ತಮ್ಮ ಪ್ರವಾಸವನ್ನು ರದ್ದುಗೊಳಿಸಿದರು. ಆ ವೇಳೆ 'ಭೂಗತ ಜಗತ್ತು ತನ್ನನ್ನು ಕೊಲ್ಲಲು ಯತ್ನಿಸುತ್ತಿದೆ' ಎಂದು ಹೇಳಿದ್ದರು. ರಶ್ದಿಯವರ ಮೇಲೆ ಹತ್ಯೆಯ ಯತ್ನಗಳು ಹಲವು ಬಾರಿ ನಡೆದಿವೆ. ಕಳೆದ ಮೂರು ವರ್ಷಗಳ ಹಿಂದೆ ನ್ಯೂಯಾರ್ಕ್‌ನಲ್ಲಿ ಅವರ ಮೇಲೆ ವ್ಯಕ್ತಿಯೊಬ್ಬ ದಾಳಿ ಮಾಡಿದ್ದ. ಅದೂ ಸಾಹಿತ್ಯ ಸಂಬಂಧಿ ಕಾರ್ಯಕ್ರಮ. ವೇದಿಕೆಯ ಮೇಲೆ ಚಾಕು ಹಿಡಿದು ನುಗ್ಗಿದ್ದ ಆತ ಚಾಕುವಿನಿಂದ ಇರಿದಿದ್ದ. ಆ ದಾಳಿಯಲ್ಲಿ ರಶ್ದಿ ಅವರು ತಮ್ಮ ಬಲಗಣ್ಣನ್ನು ಕಳೆದುಕೊಂಡರು. ಈ ದುರ್ಘಟನೆಯ ನಂತರ ಒಂದು ಕಾದಂಬರಿಯನ್ನು ರಚಿಸಿದರು. ಈಗ ಜೀವಮಾನದ ಸಾಧನೆಗಾಗಿ ಶಾಂತಿ ಪುರಸ್ಕಾರ ಅವರಿಗೆ ಸಂದಿದೆ.

'ಡೇಟನ್ ಲಿಟರರಿ ಪೀಸ್ ಪ್ರೈಝ್' ಪುರಸ್ಕಾರವನ್ನು ಕಥನ ಸಾಹಿತ್ಯದಲ್ಲಿ ಮಾನವೀಯ ಮೌಲ್ಯ ಮತ್ತು ಶಾಂತಿ–ಸಂವಾದವನ್ನು ಪ್ರತಿಪಾದಿಸುವವರನ್ನು ಗುರುತಿಸಿ ಅಮೆರಿಕದ ಡೇಟನ್ ನಗರದ ಸ್ವಯಂ ಸೇವಾ ಸಂಸ್ಥೆಯೊಂದು ನೀಡುತ್ತದೆ. ಸಾಹಿತ್ಯದಲ್ಲಿ ಶಾಂತಿಯನ್ನು ಉತ್ತೇಜಿಸಲು ಜಾಗತಿಕವಾಗಿ ನೀಡುವ ಪ್ರಮುಖ ಅಂತರರಾಷ್ಟ್ರೀಯ ಪ್ರಶಸ್ತಿ ಇದಾಗಿದೆ. ರಶ್ದಿ ಜೀವಮಾನದ ಸಾಧನೆಯನ್ನು ಗುರುತಿಸಿ ಈ ಪುರಸ್ಕಾರವನ್ನು ನೀಡಲಾಗಿದೆ.

'ದಿ ಸಟಾನಿಕ್ ವರ್ಸಸ್' ಕಾದಂಬರಿ ನಂತರ ವಿವಾದಾತ್ಮಕ ಲೇಖಕ ಎಂದೇ ಅವರನ್ನು ಕೆಲವರು ಗುರುತಿಸುತ್ತಾರೆ. ಅವರ 'ಮಿಡ್‌ನೈಟ್ಸ್ ಚಿಲ್ಡ್ರನ್' ಕೃತಿಗೆ ಬೂಕರ್ ಪ್ರಶಸ್ತಿ ಲಭಿಸಿತ್ತು. 20ನೇ ಶತಮಾನದ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು ಎನ್ನುವ ಹೆಗ್ಗಳಿಕೆಗೂ ಆ ಕೃತಿ ಪಾತ್ರವಾಗಿತ್ತು. ಬ್ರಿಟನ್ ಸರ್ಕಾರದಿಂದ 'ಸರ್' ಎಂಬ ಗೌರವಕ್ಕೂ ರಶ್ದಿ ಪಾತ್ರವಾಗಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65